**ದಿನಾಂಕಃ22-11-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಎನ್.ಎಸ್. ವಕೀಲರಿಂದಃ**

ನ್ಯಾಯಾಲಯಕ್ಕೆ ಬರಲು ನನಗೆ ನನ್ನ ವಕೀಲರು ತಿಳಿಸಿದ್ದಾರೆ. ನನಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಆಗಲೀ ನೋಟಿಸ್ ಆಗಲೀ ಬಂದಿಲ್ಲ. ನನಗೆ ವಾದಿ ವಕೀಲರ ಬಳಿ ಕರೆದುಕೊಂಡು ಹೋಗಿದ್ದಾನೆ. ವಾದಿ ಹೇಳಿದಗೊಸ್ಕರ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದಿದ್ದೇನೆಂದರೆ ಸರಿ. ನಾನು ನ್ಯಾಯಾಲಯದ ಯಾವುದೇ ಸಮನ್ಸ್‌ಗೆ ಸಹಿ ಮಾಡಿಲ್ಲ.

**2)** ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಯಾವ ವಿಷಯ ಬರೆಯಲಾಗಿದೆ ನನಗೆ ಗೊತ್ತಿಲ್ಲ. 10,00,000/- ರೂಪಾಯಿಗೆ ಮಾತುಕತೆ ಆಗಿತ್ತು, ಅದರ ಪೈಕಿ 9,00,000/- ರೂಪಾಯಿ ಹಣವನ್ನು ವಾದಿ ಪ್ರತಿವಾದಿಗೆ ಕೊಟ್ಟಿದ್ದಾನೆ. ಸದರಿ ವ್ಯವಹಾರ ಕೋನಂಪಲ್ಲಿಯ ಜಮೀನು ವಿಷಯವಾಗಿ ಆಗಿದೆ. ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ನನಗೆ ಪ್ರತಿವಾದಿ ಕರೆಸಿದ್ದಾನೆ.

**3)** ಪ್ರತಿವಾದಿ ನನಗೆ 14-15 ವರ್ಷದಿಂದ ಪರಿಚಯ. ಪ್ರತಿವಾದಿ ಮೂಲತಃ ಕೋನಂಪಲ್ಲಿ ಗ್ರಾಮದವನು, ಆದರೆ ಆತನಿಗೆ ಆರೋಗ್ಯ ಸರಿ ಇರದ ಕಾರಣ ಚಿಂತಾಮಣಿ ನಗರದ ಸೊಣ್ಣಶೆಟ್ಟಿಹಳ್ಳಿ ಗ್ರಾಮದಲ್ಲಿ ವಾಸವಿದ್ದಾನೆ. ಪ್ರತಿವಾದಿಯ ಮನೆ ಮತ್ತು ವಿಳಾಸ ನನಗೆ ಗೊತ್ತಿಲ್ಲ, ವಾದಿ ಕೂಡ ನನಗೆ 14 ರಿಂದ 15

ವರ್ಷದಿಂದ ಪರಿಚಯ ಇದ್ದಾನೆ. ವಾದಿ ಮಾಡುವ ಎಲ್ಲಾ ವ್ಯವಹಾರಗಳಿಗೆ ನಾನು ಸಾಕ್ಷ್ಯ ಹೇಳುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಇದೇ ಮೊದಲ ಬಾರಿಗೆ ಬಂದಿದ್ದೇನೆಂದು ನುಡಿಯುತ್ತಾರೆ. ವಾದಿ ವ್ಯವಸಾಯ ಮಾಡುತ್ತಾನೆ.

**4)** 2011ನೇ ಇಸವಿಯಲ್ಲಿ ಮಧ್ಯಾಹ್ನ 3.00 ರಿಂದ 4.00 ಗಂಟೆ ನಡುವೆ ತಾಲ್ಲೂಕು ಕಛೇರಿಯಲ್ಲಿ ನಾನು ಸಹಿ ಮಾಡಿದ್ದೇನೆ. ಆ ದಿನ ನನ್ನನ್ನು ಪ್ರತಿವಾದಿ ಸಹಿ ಮಾಡಲು ಬರಬೇಕು ಎಂದು ಕರೆದಿದ್ದಾನೆ. ಆ ದಿನ ನಾನು ಗಜಾನನ ಸರ್ಕಲ್ ಬಳಿ ಇದ್ದೆ, ಆಗ ಪ್ರತಿವಾದಿ ತಾಲ್ಲೂಕು ಕಛೇರಿಗೆ ಬರಲು ಕೇಳಿಕೊಂಡಿದ್ದಾನೆ. ಗಜಾನನ ಸರ್ಕಲ್ ಬಳಿ ಇದ್ದಾಗ ಪ್ರತಿವಾದಿಯು ತನ್ನ ಮತ್ತು ವಾದಿಯ ನಡುವೆ ಖರೀದಿ ಕರಾರು ಪತ್ರ ಆಗಲಿದೆ, ಅದಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಲು ಬರಬೇಕು ಎಂದು ತಿಳಿಸಿದ.

**5)** ಪ್ರತಿವಾದಿ ತನ್ನ ಜಮೀನು ಮಾರಾಟ ಮಾಡಿದ ಸಲುವಾಗಿ ನನ್ನನ್ನು ಆ ದಿನ ಕರೆದ. 9 ಐಟಂ ಜಮೀನುಗಳು ಅವುಗಳ ವಿಸ್ತೀರ್ಣ 15-16 ಎಕರೆ ಇವೆ ಎಂದು ಆ ದಿನ ಮಾತನಾಡಿಕೊಳ್ಳುತ್ತಿದ್ದರು. ಒಟ್ಟು ಐಟಂ ಜಮೀನುಗಳು 2011ನೇ ಇಸವಿಯಲ್ಲಿ ಎಷ್ಟು ಬೆಲೆ ಬಾಳುತ್ತಿದ್ದವು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಐಡಿಯಾ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನುಗಳು ಎಷ್ಟು ಬೆಲೆ ಬಾಳುತ್ತವೆ ಎನ್ನುವುದನ್ನು ನಾನು ವಿಚಾರಿಸಿಲ್ಲ.

**6)** ಸದರಿ ಆಸ್ತಿಗಳನ್ನು ಏಕೆ ಮಾರಾಟ ಮಾಡುತ್ತಿದ್ದೀರಿ ಎಂದು ನಾನು ಪ್ರತಿವಾದಿಗೆ ಕೇಳಿಲ್ಲ. ಪ್ರತಿವಾದಿ ಯಾವ ಕಾರಣಕ್ಕಾಗಿ ಆಸ್ತಿಗಳನ್ನು ಮಾರಾಟ ಮಾಡಿದ್ದಾನೆ ಎಂದು ಖರೀದಿ ಪತ್ರದಲ್ಲಿ ನಮೂದು ಇದೆ ಎನ್ನುವ ಬಗ್ಗೆ ನನಗೆ ಇಲ್ಲಿಯವರೆಗೂ ಗೊತ್ತಿಲ್ಲ. ಖರೀದಿ ಕರಾರು ಪತ್ರಕ್ಕೆ ಮೊದಲಿಗೆ ಪ್ರತಿವಾದಿ, ನಂತರ ವಾದಿ, ಆ ಮೇಲೆ ವೆಂಕಟರೆಡ್ಡಿ(ಪಿ.ಡಬ್ಲ್ಯೂ.2), ನಂತರ ನಾನು ಸಹಿ ಮಾಡಿದ್ದೇನೆ.

**7)** ಪ್ರತಿವಾದಿ ಮತ್ತು ಪತ್ರ ಬರಹಗಾರ ನಾನು ಹೋಗುವಷ್ಟರಲ್ಲಿ ಖರೀದಿ ಕರಾರು ಪತ್ರ ಬರೆದಿದ್ದರು, ನಂತರ ನಾನು ಹೋಗಿ ಸಹಿ ಮಾಡಿದ್ದೇನೆ. ಸ್ಟಾಂಪ್ ಪೇಪರ್‌ನ್ನು ಪ್ರತಿವಾದಿ ಮತ್ತು ನಾಗರಾಜ ಎಂಬ ಪತ್ರ ಬರಹಗಾರರು ತಂದಿದ್ದರು, ನಂತರ ನಾವು ಸಹಿ ಮಾಡಿದ್ದೇವೆ. ಖರೀದಿ ಕರಾರು ಪತ್ರಕ್ಕೆ ಪ್ರತಿವಾದಿ 5 ಕಡೆ ಸಹಿ ಮಾಡಿದ್ದಾನೆ, ನಾನು ಮತ್ತು ವೆಂಕಟರೆಡ್ಡಿ ಹಾಗೂ ವಾದಿ ಒಂದು ಕಡೆ ಸಹಿ ಮಾಡಿದ್ದೇವೆ.

**8)** ಖರೀದಿ ಕರಾರು ಪತ್ರ ಆದ ದಿನ ಪ್ರತಿವಾದಿ ಬಂದೇ ಇರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಪ್ರತಿವಾದಿ ಇದ್ದಾನಾ ಎನ್ನುವ ಪ್ರಶ್ನೆಗೆ ಸಾಕ್ಷಿ ನ್ಯಾಯಾಲಯದ ಆವರಣದ ಎಡಭಾಗದಲ್ಲಿ ಕುಳಿತಿರುವ ಪ್ರತಿವಾದಿಯನ್ನು ನೋಡಿ ಗುರ್ತಿಸಿರುತ್ತಾರೆ. ಪ್ರತಿವಾದಿಯನ್ನು ನಾನು ನ್ಯಾಯಾಲಯಕ್ಕೆ ಬಂದ ಬಳಿಕವಷ್ಟೆ ನೋಡುತ್ತಿದ್ದೇನೆಂದರೆ ಸರಿಯಲ್ಲ.

**9)** ಪ್ರತಿವಾದಿ ಯಾವುದೇ ಆಸ್ತಿಗಳನ್ನು ಮಾರಾಟ ಮಾಡಿರುವುದಿಲ್ಲ ಮತ್ತು ಖರೀದಿ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು, ವಾದಿ ಮತ್ತು ಸಾಕ್ಷಿದಾರರು ಕೂಡಿ ನಿ.ಪಿ.10 ದಾಖಲೆಯನ್ನು ಸೃಷ್ಟಿಸಿ ಪ್ರತಿವಾದಿಯ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸಹಿಯನ್ನು ನಾವೇ ಸೃಷ್ಟಿಸಿ ದಾಖಲೆಯನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಆತನ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೂ ಮತ್ತು ಪ್ರತಿವಾದಿಗೆ ಯಾವುದೇ ಪರಿಚಯ ಇಲ್ಲ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**